ಕೊಟ್ಟ. ಸೋಮವಾರ ತಿರುಗಿ ಕ್ರೋಯ್ಡೊನ್‌ಗೆ ಹೋದೆ. ಅಲ್ಲಿ ಪ್ರಶ್ನೆಗಳನ್ನು ಕೇಳಿದ್ರು. ಸಂದರ್ಶನ ಮಾಡಿದ್ರು. ಆಮೇಲೆ ತಾತ್ಕಾಲಿಕ ವಸತಿಗೃಹಕ್ಕೆ ಕಳಿಸಿದ್ರು. ಅಲ್ಲಿ ಅಧಿಕಾರಿಗಳು ನನ್ನನ್ನು ಇಷ್ಟಪಟ್ಟಿಲ್ಲ ಅಂತ ತಿಳ್ಕೊಳ್ಳೋಕೆ ತುಂಬಾ ವಾರ ಬೇಕಾಯ್ತು. ಕೈ ತೊಳಕೊಂಡ್ರೆ ಸಾಕಾಗಿತ್ತು ಅವ್ರಿಗೆ. ಬಹುಶಃ ಘ–ದಲ್ಲಿ ನನ್ನ ಜೀವ ಅಪಾಯದಲ್ಲಿತ್ತು ಅಂತ ಅವ್ರು ನಂಬಲಿಲ್ಲ. ಇಲ್ಲಿ ಇರ್ಬೇಕು ಅಂತ ಹಾಕಿದ್ದ ಅರ್ಜಿ ತಿರಸ್ಕರಿಸಿದ್ರು. ನಮ್ಮಂತಹ ನಿರಾಶ್ರಿತರಿಗೆ ಸಲಹೆ ನೀಡುವವ್ರು ಮತ್ತೆ ಮನವಿ ಸಲ್ಲಿಸೋಕೆ ಹೇಳಿದ್ರು. ಮತ್ತೊಮ್ಮೆ ತಿರಸ್ಕಾರ ಆಯ್ತು. ಮತ್ತೆ ಅರ್ಜಿ, ಮತ್ತೆ ತಿರಸ್ಕಾರ ಅಂತ ತಿಂಗಳು ತಿಂಗಳು ಕಳೀತು. ಆಗ ನಾನು ಗ್ಲಾಸ್ಗೋದಲ್ಲಿ ಇದ್ನಲ್ಲ, ನಿಧಾನಕ್ಕೆ ಆಲಸ್ಯಕ್ಕೆ ಬಲಿಯಾಗ್ತಾ ಇದ್ದೆ. ಅವ್ರು ಕೊಟ್ಟ ಜಾಗದಲ್ಲೇ ಇರ್ಬೇಕಾಗಿತ್ತು ನಾನು. ನನ್ನ ಹತ್ರ ಕಾಸಿರಲಿಲ್ಲ. ನಿತ್ಯದ ಅವಶ್ಯಕತೆಗೆ ಅಂತ ಒಂದು ಕಾರ್ಡ್ ಇತ್ತು. ಪ್ರಯಾಣ ಮಾಡೋಕೆ ಅನುಮತಿ ಇರ್ಲಿಲ್ಲ. ಸ್ವಲ್ಪ ಕಾಸು ಸಂಪಾದಿಸಿ ದೇಹ–ಮನಸ್ಸು ಆರೋಗ್ಯದಲ್ಲಿ ಇಟ್ಕೊಳ್ಳೋಣ ಅಂದ್ರೆ ಕೆಲಸ ಮಾಡೋಕೂ ಅನುಮತಿ ಇರ್ಲಿಲ್ಲ.

ಹೌದು, ನಾನು ಕೆಲಸ ಹುಡುಕ್ತಿದ್ದೆ. ಅದ್ಕೇ ನಂಗೆ ಜೈಲಾಯ್ತು. ಸುಳ್ಳು ದಾಖಲೆ ಪತ್ರ ಬಳಸಿ ಕೆಲಸಕ್ಕೆ ಸೇರೋಕೆ ಹೋಗಿದ್ದೆ. ಸುಳ್ಳು ದಾಖಲೆ ಯಾಕೆ ಬಳಸಿದೆ ಅಂದ್ರೆ ನನ್ನತ್ರ ನನ್ನ ರಾಷ್ಟ್ರೀಯತೆ ಸಾಬೀತುಪಡಿಸೋ ಯಾವ ಪತ್ರವೂ ಇರ್ಲಿಲ್ಲ. ಈ ಕಾಗದ ಪತ್ರ ಎಲ್ಲಾ ಗ್ಲಾಸ್ಗೋದಲ್ಲಿದ್ದ ನಮ್ಮದೇ ಕೂಟದ ಒಬ್ರಿಗೆ ಸೇರಿದ್ದಾಗಿತ್ತು. ಅವ್ರಿಗೆ ಇಲ್ಲೇ ಇದ್ದು ಕೆಲಸ ಮಾಡೋಕೆ ಅನುಮತಿ ಸಿಕ್ಕಿತ್ತು. ಆದ್ರೆ ಅವ್ರಿಗೆ ಏನೋ ಕುಟುಂಬದ ಸಮಸ್ಯೆ ಬಂದು ತಿರುಗಿ ಹೋಗ್ಬೇಕಾಗಿತ್ತು. ಹೋಗ್ದೇ ಇದ್ರೆ ಊರಲ್ಲಿದ್ದ ಎಲ್ಲಾ ಜಮೀನು ಕಳಕೊಳ್ತಿದ್ರು. ಒಮ್ಮೆ ತನ್ನ ದೇಶಕ್ಕೆ ಹೋದ ಅಂದ್ರೆ ಇಲ್ಲಿ ನಿರಾಶ್ರಿತ ಅನ್ನೋ ಸ್ಥಾನ ಹೋಗ್ಬಿಡ್ತಿತ್ತು. ತಿರುಗಿ ಬರೋಕೂ ಆಗ್ತಿರ್ಲಿಲ್ಲ. ಬೇರೆ ಉಪಾಯ ಇಲ್ದೇ ಅವ್ರು ಹೋದ್ರು. ನಾನು ಅವರ ಹತ್ರ ದಾಖಲೆ ಎಲ್ಲ ಇಸ್ಕೊಂಡೆ. ಮತ್ತೆ ಕೆಲ್ಸಕ್ಕೆ ಸೇರೋಣ ಅಂತ ಒಂದು ಸಂಸ್ಥೆಗೆ ಹೋದೆ. ಆ ಸಂಸ್ಥೆಯವರಿಗೆ ಇದು ನನ್ನ ಕಾಗದ ಪತ್ರ ಅಲ್ಲ ಅಂತ ಹೇಗೆ ತಿಳೀತೋ ಗೊತ್ತಿಲ್ಲ. ಅಂಥ ಯಾವ ಸೂಚನೇನೂ ಅವ್ರು ಕೊಡ್ಲಿಲ್ಲ; ಪ್ರಶ್ನೆನೂ ಕೇಳ್ಲಿಲ್ಲ. ಬರೀ ನನ್ನ ಬಗ್ಗೆ, ಕೆಲಸದ ಅನುಭವದ ಬಗ್ಗೆ, ಯಾವ ಕೆಲಸ ಮಾಡೋಕೆ ಇಷ್ಟ ಅನ್ನೋದರ ಬಗ್ಗೆ ಅಷ್ಟೇ ಕೇಳಿದ್ರು. ಆಮೇಲೆ ಯಾವ್ದೊ ಫಾರ್ಮ್ ಬೇಕು ಅಂತ

